ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5 Issue 4, January-February, 2024, Pp. 150-154.**
**©*IIMRD*, Mysuru**
**www.iimrd.com**

# ತುಮಕೂರು ನಗರದ ಅಪ್ರಕಟಿತ ಸ್ಮಾರಕ ಶಿಲ್ಪಗಳು

**ಶ್ರೀನಿವಾಸ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು

**ಸಾರಾಂಶ: (Abstract)**

*ತುಮಕೂರು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಮಹತ್ವವನ್ನು ಪಡೆದ ನೆಲೆ ಭೌಗೋಳಿಕವಾಗಿ ಅನೇಕ ಬೆಟ್ಟಗುಡ್ಡಗಳ ಸಾಲುಗಳನ್ನು ಒಳಗೊಂಡಿದ್ದು, ಪ್ರಾಕೃತಿಕ ಸಂಪತ್ತು ಹೇರಳವಾಗಿದೆ. ಈ ಪ್ರದೇಶವನ್ನು ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ನೊಳಂಬರು, ವಿಜಯನಗರ ಸಾಮ್ರಾಜ್ಯ ಹಾಗೂ ಅನೇಕ ಸ್ಥಳೀಯ ಪಾಳೆಗಾರರ ಮನೆತನಗಳು[1] ಆಳ್ವಿಕೆಯನ್ನು ನಡೆಸಿ ಅನೇಕ ಕುರುವುಗಳನ್ನು ಬಿಟ್ಟು ಹೋಗಿದ್ದಾರೆ. ಪ್ರಸ್ತುತ ತುಮಕೂರಿನಲ್ಲಿ ಇತಿಹಾಸದ ಆಕರಗಳಾದ ಸ್ಮಾರಕ ಶಿಲ್ಪಗಳನ್ನು ಹೊಸದಾಗಿ ಶೋಧನೆ ಮಾಡಲಾಗಿದೆ. ತುಮಕೂರು ನಗರ ಪರಿಸರ ವ್ಯಾಪ್ತಿಯಲ್ಲಿ ಆರು ವೀರಗಲ್ಲುಗಳು, ಆರು ಮಾಸ್ತಿಗಲ್ಲುಗಳನ್ನು[2] ನಾವು ಕಾಣಬಹುದು.*

**ಮುಖ್ಯಪದಗಳು (Keywords):** ತುಮಕೂರು, ವೀರಗಲ್ಲುಗಳು, ವೀರಮಾಸ್ತಿಗಲ್ಲು.

**ಪೀಠಿಕೆ**

ಡಾ. ಎಂ. ಚಿದಾನಂದ ಮೂರ್ತಿ ಅವರ ಪ್ರಕಾರ ವೀರಗಲ್ಲು ಎಂದರೆ "ವೀರರು ತಮ್ಮ ಸ್ವಾರ್ಥಕ್ಕಾಗಿ ಮಡಿಯದೆ, ಸಮಾಜದ ಒಳಿತಿಗಾಗಿ ಪ್ರಾಣತ್ಯಾಗ ಮಾಡಿದ ನೆನಪಿಗೋಸ್ಕರ ಹಾಕಿಸಿರುವ ಸ್ಮಾರಕ ಶಿಲ್ಪಗಳೇ ವೀರಗಲ್ಲುಗಳು[3] "

**ಒಂದನೇ ವೀರಗಲ್ಲು**

**ಸ್ಥಳ:** ತುಮಕೂರು ಮಹಾನಗರ ಪಾಲಿಕೆ ಮುಂಭಾಗ, **ಕಾಲ:** 15–16ನೇ ಶತಮಾನ. **ಭೌತಿಕ ಸ್ಥಿತಿ:** ಬಿಳಿ ಮತ್ತು ಕೆಂಪು ಮಿಶ್ರಿತ ಒರಟು ಶಿಲೆ, ಎತ್ತರ 2ಅಡಿ, 2ಅಡಿ ಆಗಲ, 2 1/2ಅಡಿ ದಪ್ಪ, **ಪ್ರಸುತ್ತ ಸ್ಥಿತಿ:** ಸಂರಕ್ಷಿಸಲಾಗಿದೆ. ವಿ**ವರಣೆ:** ಇದು ಒಂದು ವೀರಗಲ್ಲು ಆಗಿದ್ದು ವೀರನು ಸಧೃಡವಾಗಿ ಯುದ್ಧ ಮಾಡುವಂತೆ ತೊರುತ್ತಿದ್ದು, ಎರಡು ಕೈಯಲ್ಲಿ ಭರ್ಜಿ ಆಯುಧವನ್ನು ಹಿಡಿದು ನಿಂತಿದ್ದಾನೆ ಈ ಶಿಲ್ಪದಲ್ಲಿ ವೀರನನ್ನು ಸುಂದರವಾಗಿ ಕೆತ್ತಲಾಗಿದೆ. ಜೊತೆಗೆ ಕಿವಿಯೋಲೆ ತೋಳುಬಂದಿ, ಕಾಲುಖಡಗ, ಕೈಖಡಗ, ಅಲ್ಲದೆ ಕಂಠಹಾರ, ನಡುಪಟ್ಟಿ, ಕೇಶವನ್ನು ಬಲಕ್ಕೆ ಎಳೆದು ಕಟ್ಟಲಾಗಿದೆ, ಕೇಶವು ಕಿರೀಟದಂತೆ ಕಾಣುತ್ತದೆ. ಶಿಲ್ಪದ ಮೇಲುಭಾಗದಲ್ಲಿ ಸೂರ್ಯ ಚಂದ್ರನ ಕೆತ್ತಲಾಗಿದ್ದು ಸ್ವರ್ಗ ಪರಿಕಲ್ಪನೆಯನ್ನು ತಿಳಿಸುತ್ತದೆ.

*Please cite this article as: ಅಮರೇಶ ಜಿ. ಮತ್ತು ಶ್ರೀನಿವಾಸ* (2024). ತುಮಕೂರು ನಗರದ ಅಪ್ರಕಟಿತ ಸ್ಮಾರಕ ಶಿಲ್ಪಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ. 150–154.*

**ಎರಡನೇ ವೀರಗಲ್ಲು**

**ಸ್ಥಳ**: ತುಮಕೂರಿನ ಹನುಮಂತಪುರ ಬಸ್ಸು ನಿಲ್ದಾಣ ಮುಂಭಾಗ, **ಕಾಲ:** 16–17ನೇ ಶತಮಾನ **ಭೌತಿಕ ಸ್ಥಿತಿ:** ಬಿಳಿ ಮತ್ತು ಕೆಂಪು ಮಿಶ್ರಿತ ಒರಟು ಶಿಲೆ, ಎತ್ತರ 2ಅಡಿ, 2ಅಡಿ ಅಗಲ, 1/2ಅಡಿ ದಪ್ಪ. **ಪ್ರಸುತ್ತ ಸ್ಥಿತಿ:** ಸಂರಕ್ಷಿಸಲಾಗಿದೆ. **ವಿವರಣೆ:** ಇದು ಒಂದು ವೀರಗಲ್ಲು ಆಗಿದ್ದು ವೀರನು ಸಧೃಡವಾಗಿ ಯುದ್ಧ ಮಾಡುವಂತೆ ತೊರುತ್ತಿದ್ದು, ಎರಡು ಕೈಯಲ್ಲಿ ಭರ್ಜಿ ಆಯುಧವನ್ನು ಹಿಡಿದು ನಿಂತಿದ್ದಾನೆ ಈ ಶಿಲ್ಪದಲ್ಲಿ ವೀರನನ್ನು ಸುಂದರವಾಗಿ ಕೆತ್ತಲಾಗಿದೆ. ಜೊತೆಗೆ ಕಿವಿಯೋಲೆ ತೋಳುಬಂದಿ, ಕಾಲುಖಡಗ, ಕೈಖಡಗ, ಅಲ್ಲದೆ ಕಂಠಹಾರ, ನಡುಪಟ್ಟಿ, ಕೇಶವನ್ನು ಬಲಕ್ಕೆ ಎಳೆದು ಕಟ್ಟಲಾಗಿದೆ, ಕೇಶವು ಕಿರೀಟದಂತೆ ಕಾಣುತ್ತದೆ. ಶಿಲ್ಪದ ಮೇಲುಭಾಗದಲ್ಲಿ ಸೂರ್ಯ ಚಂದ್ರನ ಕೆತ್ತಲಾಗಿದ್ದು ಸ್ವರ್ಗ ಪರಿಕಲ್ಪನೆಯನ್ನು ತಿಳಿಸುತ್ತದೆ.

**ಮೂರನೇ ವೀರಗಲ್ಲು**

**ಸ್ಥಳ:** ತುಮಕೂರಿನ ಉಮಾ ಪ್ರಗತಿ ಮುಂಭಾಗ, **ಕಾಲ:** 15–16ನೇ ಶತಮಾನ. **ಭೌತಿಕ ಸ್ಥಿತಿ:** ಬಿಳಿ ಮತ್ತು ಕೆಂಪು ಮಿಶ್ರಿತ ಒರಟು ಶಿಲೆ, ಎತ್ತರ 2ಅಡಿ, 2ಅಡಿ ಅಗಲ, 1/2ಅಡಿ ದಪ್ಪ, **ಪ್ರಸುತ್ತ ಸ್ಥಿತಿ:** ಸಂರಕ್ಷಿಸಲಾಗಿದೆ. **ವಿವರಣೆ:** ಇದು ಒಂದು ವೀರಗಲ್ಲು ಆಗಿದ್ದು ವೀರನು ಕುದರೆ ಮೇಲೆ ಕುಳಿತು ಯುದ್ಧ ಮಾಡುವಂತೆ ತೊರುತ್ತಿದ್ದು, ಎಡಗೈಯಲ್ಲಿ ಕುದರೆ ಲಗಾಮು, ಬಲಗೈಯಲ್ಲಿ ಖಡ್ಗ ಹಿಡಿದು ನಿಂತಿದ್ದಾನೆ. ಈ ಶಿಲ್ಪದಲ್ಲಿ ವೀರನನ್ನು ಸುಂದರವಾಗಿ ಕೆತ್ತಲಾಗಿದೆ. ಜೊತೆಗೆ ಕಿವಿಯೋಲೆ ತೋಳುಬಂದಿ, ಕಾಲುಖಡಗ, ಕೈಖಡಗ, ಅಲ್ಲದೆ ಕಂಠಹಾರ, ನಡುಪಟ್ಟಿ, ಕೇಶವನ್ನು ಬಲಕ್ಕೆ ಎಳೆದು ಕಟ್ಟಲಾಗಿದೆ, ಕೇಶವು ಕಿರೀಟದಂತೆ ಕಾಣುತ್ತದೆ. ಶಿಲ್ಪದ ಮೇಲುಭಾಗದಲ್ಲಿ ಸೂರ್ಯ ಚಂದ್ರನ ಕೆತ್ತಲಾಗಿದ್ದು ಸ್ವರ್ಗ ಪರಿಕಲ್ಪನೆಯನ್ನು ತಿಳಿಸುತ್ತದೆ.

**ನಾಲ್ಕನೇ ವೀರಗಲ್ಲು**

**ಸ್ಥಳ:** ತುಮಕೂರಿನ ಬಾಟವಾಡಿಯ ಅಗ್ನಿಶಾಮಕ ಠಾಣೆಯ ರೈಲ್ವೆ ಗೇಟ್ ಹಿಂಭಾಗ, **ಕಾಲ:** 15–16ನೇ ಶತಮಾನ. **ಭೌತಿಕ ಸ್ಥಿತಿ**: ಬಿಳಿ ಮತ್ತು ಕೆಂಪು ಮಿಶ್ರಿತ ಒರಟು ಶಿಲೆ, ಎತ್ತರ 2ಅಡಿ, 2ಅಡಿ ಅಗಲ, 1/2ಅಡಿ ದಪ್ಪ, **ಪ್ರಸುತ್ತ ಸ್ಥಿತಿ**: ಸಂರಕ್ಷಿಸಲಾಗಿದೆ. **ವಿವರಣೆ:** ಇದು ಒಂದು ವೀರಗಲ್ಲು ಆಗಿದ್ದು ವೀರನು ಸಧೃಡವಾಗಿ ಯುದ್ಧ ಮಾಡುವಂತೆ ತೊರುತ್ತಿದ್ದು, ಎಡಗೈಯಲ್ಲಿ ಉದ್ದನೆಯ ಖಡ್ಗ, ಬಲಗೈಯಲ್ಲಿ ಕೊಡಲಿ ಹಿಡಿದು ನಿಂತಿದ್ದಾನೆ. ಈ ಶಿಲ್ಪದಲ್ಲಿ ವೀರನನ್ನು ಸುಂದರವಾಗಿ ಕೆತ್ತಲಾಗಿದೆ. ಜೊತೆಗೆ ಕಿವಿಯೋಲೆ, ತೋಳುಬಂದಿ, ಕಾಲುಖಡಗ, ಕೈಖಡಗ, ಅಲ್ಲದೆ ಕಂಠಹಾರ, ನಡುಪಟ್ಟಿ, ಕೇಶವನ್ನು ಬಲಕ್ಕೆ ಎಳೆದು ಕಟ್ಟಲಾಗಿದೆ. ಕೇಶವು ಕಿರೀಟದಂತೆ ಕಾಣುತ್ತದೆ. ಶಿಲ್ಪದ ಮೇಲುಭಾಗದಲ್ಲಿ ಸೂರ್ಯ ಚಂದ್ರನ ಕೆತ್ತಲಾಗಿದ್ದು ಸ್ವರ್ಗ ಪರಿಕಲ್ಪನೆಯನ್ನು ತಿಳಿಸುತ್ತದೆ.

**ಐದನೇ ವೀರಗಲ್ಲು**

**ಸ್ಥಳ:** ತುಮಕೂರಿನ, ಬಾಟವಾಡಿಯ ಅಗ್ನಿಶಾಮಕ ಠಾಣೆ ಮುಂಭಾಗ **ಕಾಲ:** 15–16ನೇ ಶತಮಾನ **ಭೌತಿಕ ಸ್ಥಿತಿ:** ಬಿಳಿ ಮತ್ತು ಕೆಂಪು ಮಿಶ್ರಿತ ಒರಟು ಶಿಲೆ, ಎತ್ತರ 2ಅಡಿ, 2ಅಡಿ ಅಗಲ, 1/2ಅಡಿ ದಪ್ಪ **ಪ್ರಸುತ್ತ ಸ್ಥಿತಿ:** ಸಂರಕ್ಷಿಸಲಾಗಿದೆ. **ವಿವರಣೆ:** ಇದು ಒಂದು ವೀರಗಲ್ಲು ಆಗಿದ್ದು ವೀರನು ಸಧೃಡವಾಗಿ ಯುದ್ಧ ಮಾಡುವಂತೆ ತೊರುತ್ತಿದ್ದು, ಎಡಗೈಯಲ್ಲಿ ಬಾಚಿ, ಬಲಗೈಯಲ್ಲಿ ಖಡ್ಗ ಹಿಡಿದು ನಿಂತಿದ್ದಾನೆ. ಈ ಶಿಲ್ಪದಲ್ಲಿ

ವೀರನನ್ನು ಸುಂದರವಾಗಿ ಕೆತ್ತಲಾಗಿದೆ. ಜೊತೆಗೆ ಕಿವಿಯೋಲೆ ತೋಳುಬಂದಿ, ಕಾಲುಖಡಗ, ಕೈಖಡಗ, ಅಲ್ಲದೆ ಕಂಠಹಾರ, ನಡುಪಟ್ಟಿ, ಕೇಶವನ್ನು ಬಲಕ್ಕೆ ಎಳೆದು ಕಟ್ಟಲಾಗಿದೆ, ಕೇಶವು ಕಿರೀಟದಂತೆ ಕಾಣುತ್ತದೆ. ಶಿಲ್ಪದ ಮೇಲು ಭಾಗದಲ್ಲಿ ಸೂರ್ಯ ಚಂದ್ರನ ಕೆತ್ತಲಾಗಿದ್ದು ಸ್ವರ್ಗ ಪರಿಕಲ್ಪನೆಯನ್ನು ತಿಳಿಸುತ್ತದೆ.

**ಆರನೇ ವೀರಗಲ್ಲು**

**ಸ್ಥಳ:** ತುಮಕೂರಿನ ಸಿದ್ದಗಂಗಾ ಮಠದ ಪ್ರಾಥಮಿಕ ಆರೋಗ್ಯ ಕೇಂದ್ರದ ಎಡ ಭಾಗದಲ್ಲಿ **ಕಾಲ:** 15–16ನೇ ಶತಮಾನ, **ಭೌತಿಕ ಸ್ಥಿತಿ:** ಬಿಳಿ ಮತ್ತು ಕೆಂಪು ಮಿಶ್ರಿತ ಒರಟು ಶಿಲೆ, ಎತ್ತರ 3ಅಡಿ, 3ಅಡಿ ಅಗಲ, 1/2ಅಡಿ ದಪ್ಪ, **ಪ್ರಸುತ್ತ ಸ್ಥಿತಿ:** ಸಂರಕ್ಷಿಸಲಾಗಿದೆ. **ವಿವರಣೆ:** ಇದು ಒಂದು ವೀರಗಲ್ಲು ಆಗಿದ್ದು ಇಬ್ಬರು ಅಪ್ಸರೆಯರು ಸುಖಾಸಾನದಲ್ಲಿ ಕುಳಿತಿರುವ ವೀರನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ದೃಶ್ಯ ಜೊತೆ ಅಪ್ಸರೆಯರು ಛತ್ರ ಚಾಮರವನ್ನು ಹಿಡಿದಿರುವ ಸೇವಕಿಯರಂತೆ ಚಿತ್ರಿಸಲಾಗಿದೆ. ಶಿಲ್ಪದಲ್ಲಿ ವೀರನನ್ನು ಸುಂದರವಾಗಿ ಕೆತ್ತಲಾಗಿದೆ. ಜೊತೆಗೆ ಕಿವಿಯೋಲೆ ತೋಳುಬಂದಿ, ಕಾಲುಖಡಗ, ಕೈಖಡಗ, ಅಲ್ಲದೆ ಕಂಠಹಾರ, ನಡುಪಟ್ಟಿ, ಕೇಶವನ್ನು ಬಲಕ್ಕೆ ಎಳೆದು ಕಟ್ಟಲಾಗಿದೆ, ಶಿಲ್ಪದ ಮೇಲುಭಾಗದಲ್ಲಿ ಸೂರ್ಯ ಚಂದ್ರನ ಕೆತ್ತಲಾಗಿದ್ದು ಸ್ವರ್ಗ ಪರಿಕಲ್ಪನೆಯನ್ನು ತಿಳಿಸುತ್ತದೆ.

## ವೀರಮಾಸ್ತಿಗಲ್ಲು

**ಒಂದನೇ ವೀರಮಾಸ್ತಿಗಲ್ಲು**

**ಸ್ಥಳ:** ತುಮಕೂರಿನ ಮಹಾನಗರ ಪಾಲಿಕೆ ಮುಂಭಾಗ **ಕಾಲ:** 15–16ನೇ ಶತಮಾನ **ಭೌತಿಕ ಸ್ಥಿತಿಗತಿ:** ಕೆಂಪು ಮತ್ತು ಬಿಳಿ ಕಪ್ಪು ಮಿಶ್ರಿತ ಒರಟು ಶಿಲೆ, ಇದು 3ಅಡಿ ಎತ್ತರ, 2ಅಡಿ ಅಗಲ, 1/2 ಅಡಿ ದಪ್ಪವಿದೆ. **ಪ್ರಸ್ತುತ ಸ್ಥಿತಿ**: ಸಂರಕ್ಷಣೆ ಮಾಡಲಾಗಿದೆ. **ವಿವರಣೆ:** ವೀರನು ಉದ್ದವಾದ ಭರ್ಜಿಯನ್ನು ಹಿಡಿದು ಹೋರಾಟ ಮಾಡಿ ವೀರ ಮರಣ ಅಪ್ಪಿದ್ದಾನೆ. ಪಕ್ಕದಲ್ಲಿ ಅವನ ಪತ್ನಿಯು ನಮಸ್ಕಾರ ಸ್ಥಿತಿಯಲ್ಲಿ ಮಹಾಸತಿಯಾಗಿದ್ದಾಳೆ. ಜೊತೆಗೆ ಅವರಿಬ್ಬರಲ್ಲಿ ಕಿವಿಯೋಲೆ, ತೋಳುಬಂದಿ, ಕಾಲುಗಡಗ, ಕೈಗಡಗ, ಕಂಠಹಾರ, ನಡುಪಟ್ಟಿ ಕಂಡು ಬರುತ್ತವೆ.[4]

**ಎರಡನೇ ವೀರಮಾಸ್ತಿಗಲ್ಲು**

**ಸ್ಥಳ:** ತುಮಕೂರಿನ ಮಹಾನಗರ ಪಾಲಿಕೆ ಮುಂಭಾಗ **ಕಾಲ:** 15–16ನೇ ಶತಮಾನ ಭೌತಿಕ **ಸ್ಥಿತಿಗತಿ:** ಕೆಂಪು ಮತ್ತು ಬಿಳಿ ಕಪ್ಪು ಮಿಶ್ರಿತ ಒರಟು ಶಿಲೆ, ಇದು 3ಅಡಿ ಎತ್ತರ, 2ಅಡಿ ಅಗಲ, 1/2 ಅಡಿ ದಪ್ಪವಿದೆ. **ಪ್ರಸ್ತುತ ಸ್ಥಿತಿ:** ಸಂರಕ್ಷಣೆ ಮಾಡಲಾಗಿದೆ. ವಿವರಣೆ: ವೀರನು ಉದ್ದವಾದ ಖಡ್ಗವನ್ನು ಹಿಡಿದು ಜೊತೆಗೆ ಸೊಂಟಪಟ್ಟಿಯಲ್ಲಿ ಕಿರುಕತ್ತಿ ಧರಿಸಿದ್ದಾನೆ. ಹೋರಾಟ ಮಾಡಿ ವೀರ ಮರಣವನ್ನಪ್ಪಿದ್ದಾನೆ. ಪಕ್ಕದಲ್ಲಿ ಅವನ ಪತ್ನಿಯು ನಮಸ್ಕಾರ ಸ್ಥಿತಿಯಲ್ಲಿ ಮಹಾಸತಿಯಾಗಿದ್ದಾಳೆ. ಜೊತೆಗೆ ಅವರಿಬ್ಬರಲ್ಲಿ ಕಿವಿಯೋಲೆ, ತೋಳುಬಂದಿ, ಕಾಲುಗಡಗ, ಕೈಗಡಗ, ಕಂಠಹಾರ, ನಡುಪಟ್ಟಿ ಕಂಡುಬರುತ್ತವೆ.

**ಮೂರನೇ ವೀರಮಾಸ್ತಿಗಲ್ಲು**

**ಸ್ಥಳ:** ಕ್ಯಾತಸಂದ್ರ ಗುಡ್ಲಮ್ಮ ದೇವಸ್ಥಾನ ಮುಂಭಾಗ **ಕಾಲ:** 15–16ನೇ ಶತಮಾನ **ಭೌತಿಕ ಸ್ಥಿತಿಗತಿ:** ಕೆಂಪು ಮತ್ತು ಬಿಳಿ ಕಪ್ಪು ಮಿಶ್ರಿತ ಒರಟು ಶಿಲೆ, ಇದು 3ಅಡಿ ಎತ್ತರ, 2ಅಡಿ ಅಗಲ, 1/2 ಅಡಿ ದಪ್ಪವಿದೆ.

**ಪ್ರಸ್ತುತ ಸ್ಥಿತಿ:** ಸಂರಕ್ಷಣೆ ಮಾಡಲಾಗಿದೆ. **ವಿವರಣೆ:** ವೀರನು ಉದ್ದವಾದ ಭರ್ಜಿಯನ್ನು ಎಡಗೈಯಲ್ಲಿ ಹಿಡಿದಿದ್ದಾನೆ. ಹೋರಾಟ ಮಾಡಿ ವೀರ ಮರಣವನ್ನಪ್ಪಿದ್ದಾನೆ. ಪಕ್ಕದಲ್ಲಿ ಅವನ ಪತ್ನಿಯು ಕೈಯಲ್ಲಿ ಖಡ್ಗವನ್ನು ಹಿಡಿದು ನಿಂತಿದ್ದಳೆ. ಅವಳು ಮಹಾಸತಿಯಾಗಿದ್ದಾಳೆ. ಜೊತೆಗೆ ಅವರಿಬ್ಬರಲ್ಲಿ ಕಿವಿಯೋಲೆ, ತೋಳುಬಂದಿ, ಕಾಲುಗಡಗ, ಕೈಗಡಗ, ಕಂಠಹಾರ, ನಡುಪಟ್ಟಿ ಕಂಡು ಬರುತ್ತವೆ.

**ನಾಲ್ಕನೇ ವೀರಮಾಸ್ತಿಗಲ್ಲು**

**ಸ್ಥಳ:** ಕ್ಯಾತಸಂದ್ರ ಗುಡ್ಲಮ್ಮ ದೇವಸ್ಥಾನ ಮುಂಭಾಗ **ಕಾಲ:** 15–16ನೇ ಶತಮಾನ **ಭೌತಿಕ ಸ್ಥಿತಿಗತಿ:** ಕೆಂಪು ಮತ್ತು ಬಿಳಿ ಕಪ್ಪು ಮಿಶ್ರಿತ ಒರಟು ಶಿಲೆ, ಇದು 3ಅಡಿ ಎತ್ತರ, 2ಅಡಿ ಅಗಲ, 1/2 ಅಡಿ ದಪ್ಪವಿದೆ. **ಪ್ರಸ್ತುತ ಸ್ಥಿತಿ:** ಸಂರಕ್ಷಣೆ ಮಾಡಲಾಗಿದೆ. **ವಿವರಣೆ:** ವೀರನು ಉದ್ದವಾದ ಭರ್ಜಿಯನ್ನು ಹಿಡಿದು ಹೋರಾಟ ಮಾಡಿ ವೀರ ಮರಣ ಅಪ್ಪಿದ್ದಾನೆ. ಪಕ್ಕದಲ್ಲಿ ಪತಿ–ಪತ್ನಿಯ ನೃತ್ಯ ಭಂಗಿಯನ್ನು ಚಿತ್ರಿಸಲಾಗಿದೆ. ಜೊತೆಗೆ ಅವರಿಬ್ಬರಲ್ಲಿ ಕಿವಿಯೋಲೆ, ತೋಳುಬಂದಿ, ಕಾಲುಗಡುಗ, ಕೈಗಡಗ, ಕಂಠಹಾರ, ನಡುಪಟ್ಟಿ ಕಂಡು ಬರುತ್ತವೆ.

**ಐದನೇ ವೀರಮಾಸ್ತಿಗಲ್ಲು**

**ಸ್ಥಳ:** ಉಮಾ ಪ್ರಗತಿ ಕಾಲೇಜು ಮುಂಭಾಗ **ಕಾಲ:** 15–16ನೇ ಶತಮಾನ **ಭೌತಿಕ ಸ್ಥಿತಿಗತಿ:** ಕೆಂಪು ಮತ್ತು ಬಿಳಿ ಕಪ್ಪು ಮಿಶ್ರಿತ ಒರಟು ಶಿಲೆ, ಇದು 3ಅಡಿ ಎತ್ತರ, 2ಅಡಿ ಅಗಲ, 1/2 ಅಡಿ ದಪ್ಪವಿದೆ. **ಪ್ರಸ್ತುತ ಸ್ಥಿತಿ:** ಸಂರಕ್ಷಣೆ ಮಾಡಲಾಗಿದೆ. **ವಿವರಣೆ:** ವೀರನು ಉದ್ದವಾದ ಭರ್ಚಿಯನ್ನು ಹಿಡಿದು ಹೋರಾಟ ಮಾಡಿ ವೀರ ಮರಣ ಅಪ್ಪಿದ್ದಾನೆ. ಪಕ್ಕದಲ್ಲಿ ಅವನ ಪತ್ನಿಯು ನಮಸ್ಕಾರ ಸ್ಥಿತಿಯಲ್ಲಿ ಮಹಾಸತಿಯಾಗಿದ್ದಾಳೆ. ಜೊತೆಗೆ ಅವರಿಬ್ಬರಲ್ಲಿ ಕಿವಿಯೋಲೆ, ತೋಳುಬಂದಿ, ಕಾಲುಗಡುಗ, ಕೈಗಡಗ, ಕಂಠಹಾರ, ನಡುಪಟ್ಟಿ ಕಂಡು ಬರುತ್ತವೆ.

**ಆರನೇ ವೀರಮಾಸ್ತಿಗಲ್ಲು**

**ಸ್ಥಳ:** ರಾಮದೇವರ ಬೆಟ್ಟ **ಕಾಲ:** 15–16ನೇ ಶತಮಾನ **ಭೌತಿಕ ಸ್ಥಿತಿಗತಿ:** ಕೆಂಪು ಮತ್ತು ಬಿಳಿ ಕಪ್ಪು ಮಿಶ್ರಿತ ಒರಟು ಶಿಲೆ, ಇದು 3ಅಡಿ ಎತ್ತರ, 2ಅಡಿ ಅಗಲ, 1/2 ಅಡಿ ದಪ್ಪವಿದೆ. **ಪ್ರಸ್ತುತ ಸ್ಥಿತಿ:** ಸಂರಕ್ಷಣೆ ಮಾಡಲಾಗಿದೆ. **ವಿವರಣೆ:** ವೀರನು ಉದ್ದವಾದ ಭರ್ಜಿಯನ್ನು ಹಿಡಿದು ಹೋರಾಟ ಮಾಡಿ ವೀರ ಮರಣವನ್ನಪ್ಪಿದ್ದಾನೆ. ಪಕ್ಕದಲ್ಲಿ ಅವನ ಪತ್ನಿಯು ತಿರ್ಥಕುಂಡವನ್ನು ಹಿಡಿದು ನಿಂತಿದ್ದಾಳೆ. ಜೊತೆಗೆ ಅವರಿಬ್ಬರಲ್ಲಿ ಕಿವಿಯೋಲೆ, ತೋಳುಬಂದಿ, ಕಾಲುಗಡಗ, ಕೈಗಡಗ, ಕಂಠಹಾರ, ನಡುಪಟ್ಟಿ ಕಂಡು ಬರುತ್ತವೆ.

ಒಟ್ಟಾರೆ ತುಮಕೂರು ನಗರದ ಸ್ಮಾರಕ ಶಿಲ್ಪಗಳು 13–17ನೇ ಶತಮಾನಕ್ಕೆ ಸೇರಿವೆಂಬುದನ್ನ ಶಿಲ್ಪಗಳು ತಿಳಿಸುತ್ತವೆ.[5] ತುಮಕೂರು ನಗರ ಪ್ರದೇಶದಲ್ಲಿ ದೊರೆತಿರುವ ವೀರಮಾಸ್ತಿಗಲ್ಲುಗಳು ಸ್ಥಳಿಯ ಹೋರಾಟದ ಬಗ್ಗೆ ನಿಖರಮಾಹಿತಿಯನ್ನು ನೀಡುತ್ತವೆ. ಶಾಸನದ ಹೊರತಾಗಿ ವಿಜಯನಗರದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಹಾಗೂ ಇತಿಹಾಸ ಮರು ರಚಿಸುವಲ್ಲಿ ಸ್ಮಾರಕ ಶಿಲ್ಪಗಳು ಇತಿಹಾಸದ ಪ್ರಾಥಮಿಕ ಆಕರವಾಗಿವೆ. ಇಂತ ಈ ಸ್ಮಾರಕಗಳು ಈಗ ನಿಧಿಗಳ್ಳರು ನಾಶಪಡಿಸುತ್ತಿದ್ದು ಇವುಗಳ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನು ಮಾಡಬೇಕಾಗಿದೆ.

**ಕೊನೆಟಿಪ್ಪಣಿಗಳು**

1. ರೈಸ್ ಬಿ.ಎಲ್. (ಸಂ.) (1904). ಎಪಿಗ್ರಫಿಯಾ ಕರ್ನಾಟಿಕ. ಸಂಪುಟ–12. ಮೈಸೂರು ಗೌರ್ಮೆಂಟ್ ಪ್ರೆಸ್.
2. ಶ್ರೀ ನೀಲಕಂಠಶಾಸ್ತ್ರಿ. (ಸಂ.) (1956). ಎಪಿಗ್ರಫಿಯಾ ಕರ್ನಾಟಿಕ. ಸಂಪುಟ–16. ಮೈಸೂರು ಗೌರ್ಮೆಂಟ್ ಪ್ರೆಸ್.
3. ಶೇಷಾಶಾಸ್ತ್ರಿ ಆರ್. (2004). ಕರ್ನಾಟಕ ವೀರಗಲ್ಲುಗಳು. ಕನ್ನಡ ಸಾಹಿತ್ಯ ಪರಿಷತ್
4. ಪರಮಶಿವಮೂರ್ತಿ ಡಿ.ವಿ. (2010). ಕನ್ನಡ ಶಾಸನ ಶಿಲ್ಪಗಳು. ಕನ್ನಡ ವಿಶ್ವವಿದ್ಯಾಲಯ.